Akashvani: Bangalore
National Bulletin In Kannada
08.10.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
08.10.2026: 13.10hrs
**********

**ಮುಖ್ಯಾಂಶಗಳು :**

1. ಭಾರತೀಯ ವಾಯುಪಡೆಯ ೯೪ನೇ ವಾರ್ಷಿಕೋತ್ಸವಕ್ಕೆ ರಾಷ್ಟ್ರಪತಿ, ಪ್ರಧಾನಿ ಸೇರಿ ಗಣ್ಯರ ಶುಭ ಹಾರೈಕೆ
2. ಭಾರತದ ಟೆಲಿಕಾಂ ಕ್ಷೇತ್ರದ ವಿಕಾಸ ಹಾಗೂ ಡಿಜಿಟಲ್ ಸಂಪರ್ಕಕ್ಕೆ ಭಾರತೀಯ ಮೊಬೈಲ್ ಕಾಂಗ್ರೆಸ್ ಸಾಕ್ಷಿ: ಪ್ರಧಾನಿ ನರೇಂದ್ರ ಮೋದಿ
3. ೫೭ನೇ ಜಿಎಸ್‌ಟಿ ಮಂಡಳಿ ಸಭೆ ಆರಂಭ: ಕರ್ನಾಟಕದ ಮುಖ್ಯಮಂತ್ರಿ ಸೇರಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಭಾಗಿ
4. ಟೇಬಲ್ ಟೆನಿಸ್ ಹಾಗೂ ಚೇನಾ ಸ್ಮ್ಯಾಶ್ ಪಂದ್ಯಾವಳಿಯ ಮಿಶ್ರ ಡಬಲ್ಸ್‌ನಲ್ಲಿ ಭಾರತದ ಮಾನುಷ್ ಶಾ ಮತ್ತು ದಿಯಾ ಚಿಟಲೆ ಸೆಮಿಫೈನಲ್‌ಗೆ ಪ್ರವೇಶ

********

ದೇಶವು ಇಂದು ಭಾರತೀಯ ವಾಯುಪಡೆಯ ೯೪ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ೧೯೩೨ರ ಅಕ್ಟೋಬರ್ ೮ರಂದು ಸ್ಥಾಪನೆಯಾದ ಈ ಪಡೆ, ಮುಂದಿನ ದಶಕಗಳವರೆಗೆ ದೇಶದ ರಕ್ಷಣಾ ವ್ಯವಸ್ಥೆಯನ್ನು ರೂಪಿಸುವಂತಹ ವಾಯು ಶಕ್ತಿಯ ದೃಷ್ಟಿಕೋನಕ್ಕೆ ನಾಂದಿ ಹಾಡಿತು. ಈ ಸಂದರ್ಭದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ವಾಯುಪಡೆಯ ಯೋಧರು, ಮಾಜಿ ಯೋಧರು ಮತ್ತು ಅವರ ಕುಟುಂಬಗಳಿಗೆ ಶುಭಾಶಯಗಳನ್ನು ಕೋರಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಂದೇಶವೊಂದನ್ನು ಹಂಚಿಕೊಂಡಿರುವ ರಾಷ್ಟ್ರಪತಿ, ಭಾರತೀಯ ವಾಯುಪಡೆಯು ವೃತ್ತಿಪರತೆ, ಶಿಸ್ತು ಮತ್ತು ಸನ್ನದ್ಧತೆಯ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ಮೂಲಕ ದೇಶಕ್ಕೆ ಮಾದರಿ ಸೇವೆಯನ್ನು ಸಲ್ಲಿಸಿದೆ. ದೇಶದ ಭದ್ರತೆಯನ್ನು ರಕ್ಷಿಸುವಲ್ಲಿ ಭಾರತೀಯ ವಾಯುಪಡೆಯ ಯೋಧರ ಧೈರ್ಯ, ನಿಖರತೆ ಮತ್ತು ಕಾರ್ಯಾಚರಣೆಯ ಸನ್ನದ್ಧತೆಯನ್ನು 'ಆಪರೇಷನ್ ಸಿಂಧೂರ್'

ಸಾಬೀತುಪಡಿಸಿದೆ ಎಂದು ಅವರು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಭಾರತೀಯ ವಾಯುಪಡೆಗೆ ಸಂಬಂಧಿಸಿದ ವಿಡಿಯೋವೊಂದನ್ನು ಹಂಚಿಕೊಂಡಿರುವ ಪ್ರಧಾನಿ, ವಾಯುಪಡೆಯು ಆಕಾಶದಲ್ಲಿ ತನ್ನ ಶಕ್ತಿ ಮತ್ತು ಶೌರ್ಯವನ್ನು ಪ್ರದರ್ಶಿಸುವ ಮೂಲಕ ಜನರ ಮನದಲ್ಲಿ ಭದ್ರತೆಯ ಭಾವನೆಯನ್ನು ಮೂಡಿಸಿದೆ ಎಂದು ಹೇಳಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನಗಳು, ದತ್ತಾಂಶ ಮತ್ತು ಡ್ರೋನ್‌ಗಳ ಅಳವಡಿಕೆಯೊಂದಿಗೆ, ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ವಾಯುಪಡೆ ಸದಾ ಸುಸಜ್ಜಿತವಾಗಿದೆ. 'ಆಪರೇಷನ್ ಸಿಂಧೂರ್' ವಾಯುಪಡೆಯ ಯೋಧರ ಶೌರ್ಯ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. ಗೃಹ ಸಚಿವ ಅಮಿತ್ ಶಾ, ಅಜೇಯ ಶೌರ್ಯ, ಅತ್ಯಂತ ನಿಖರತೆ ಮತ್ತು ಪ್ರಬಲ ದಾಳಿಯ ಸಾಮರ್ಥ್ಯದ ಕಥನವನ್ನು ಭೂಮಿ ಹಾಗೂ ದೂರದ ಬಾಹ್ಯಾಕಾಶದಲ್ಲಿರುವ ಉಪಗ್ರಹಗಳು ಸಾಕ್ಷೀಕರಿಸುವಂತಹ ನೈಜ ವೀರರ ಪಡೆಯಿದು ಎಂದು ಬಣ್ಣಿಸಿದ್ದಾರೆ.

********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯ ಯಶೋಭೂಮಿಯಲ್ಲಿ ಇಂಡಿಯಾ ಮೊಬೈಲ್ ಕಾಂಗ್ರೆಸ್-ಐಎಂಸಿ ೧೦ನೇ ಆವೃತ್ತಿಯನ್ನು ಉದ್ಘಾಟಿಸಿದರು. ನಿನ್ನೆ ಆರಂಭವಾದ ನಾಲ್ಕು ದಿನಗಳ ಕಾರ್ಯಕ್ರಮವು, ದೂರಸಂಪರ್ಕ, ಡಿಜಿಟಲ್ ಸಂಪರ್ಕ ಮತ್ತು ತಾಂತ್ರಿಕ ಆವಿಷ್ಕಾರಗಳಲ್ಲಿ ಭಾರತದ ಗಮನಾರ್ಹ ಪ್ರಗತಿಯನ್ನು ಪ್ರದರ್ಶಿಸುತ್ತದೆ. ಐಎಂಸಿ ೨೦೨೫ರ ವಿಷಯವು ಸ್ಕೇಲ್ ವಿತ್‌ಔಟ್ ಬೌಂಡರೀಸ್ ಆಗಿದ್ದು, ಇದು ಡಿಜಿಟಲ್ ನಾವೀನ್ಯತೆ, ಮುಂದಿನ ಪೀಳಿಗೆಯ ಸಂಪರ್ಕ ಮತ್ತು ತಂತ್ರಜ್ಞಾನ-ನೇತೃತ್ವದ ಬೆಳವಣಿಗೆಯಲ್ಲಿ ಭಾರತದ ಬೆಳೆಯುತ್ತಿರುವ ಸಾಮರ್ಥ್ಯಗಳನ್ನು ಪ್ರತಿಬಿಂಬಿಸುತ್ತದೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, ಭಾರತೀಯ ಮೊಬೈಲ್ ಕಾಂಗ್ರೆಸ್ ವೇದಿಕೆಯು ಭಾರತದಲ್ಲಿ ಟೆಲಿಕಾಂ ಕ್ಷೇತ್ರದ ವಿಕಾಸ ಮತ್ತು ಡಿಜಿಟಲ್ ಸಂಪರ್ಕಕ್ಕೆ ಸಾಕ್ಷಿಯಾಗಿದೆ. ಇಂದು ದೇಶದ ಪ್ರತಿಯೊಂದು ಜಿಲ್ಲೆಗೂ ೫ಜಿ ಸಂಪರ್ಕ ತಲುಪಿದೆ. ಭಾರತದಾದ್ಯಂತ ೫ಜಿ ಸಂಪರ್ಕವನ್ನು ನಿರ್ವಹಿಸಲು ಪ್ರಸ್ತುತ ೫ ಲಕ್ಷದ ೫೦ ಸಾವಿರಕ್ಕೂ ಹೆಚ್ಚು ಬೇಸ್ ಸ್ಟೇಷನ್‌ಗಳಿವೆ ಎಂದು ಹೇಳಿದರು. ಬಳಿಕ ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ತಂತ್ರಜ್ಞಾನವು ಕೊನೆಯ ಹಳ್ಳಿಗೆ ಮಾತ್ರವಲ್ಲದೆ ಪ್ರತಿಯೊಬ್ಬ ನಾಗರಿಕರಿಗೂ ತಲುಪಬೇಕು ಎಂಬುದು ಪ್ರಧಾನಿ ಆಶಯವಾಗಿತ್ತು. ತಂತ್ರಜ್ಞಾನದ ಪ್ರಸರಣವು ಕೈಗೆಟುಕುವ ದರದಲ್ಲಿದ್ದಾಗ ಮಾತ್ರ ಯಶಸ್ವಿಯಾಗುತ್ತ ದೆ ಎಂದು ಅವರು ಹೇಳಿದರು.

********

ನವದೆಹಲಿಯ ಭಾರತ್ ಮಂಟಪದಲ್ಲಿ ೫೭ನೇ ಜಿಎಸ್‌ಟಿ ಮಂಡಳಿಯ ಸಭೆ ನಡೆಯುತ್ತಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಮ್ಮು - ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಹರಿಯಾಣದ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಹಾಗೂ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರು ಕೂಡ ಈ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ನಿಯಮ ಪಾಲನೆಯ ಸಮಯ ಮತ್ತು ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ, ಜಿಎಸ್‌ಟಿ ವಿವಾದಗಳನ್ನು ಬಗೆಹರಿಸಲು ಮತ್ತು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್  ಹರಿವನ್ನು ಸುಧಾರಿಸಲು ಅಗತ್ಯವಿರುವ ನೀತಿ ಸುಧಾರಣೆಗಳ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗುವುದು. ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಲ್ಲಿನ ಮುಂದಿನ ಹಂತದ ಸುಧಾರಣೆಗಳಿಗಾಗಿ ಸರ್ಕಾರವು ಐದು ಅಂಶಗಳ ಯೋಜನೆಯನ್ನು ಪ್ರಸ್ತಾಪಿಸಲಿದೆ ಎಂದು ಹಣಕಾಸು ಸಚಿವಾಲಯದ ಮೂಲಗಳು ತಿಳಿಸಿವೆ. ಜಿಎಸ್‌ಟಿ ವ್ಯವಸ್ಥೆಯಲ್ಲಿನ ಪ್ರಸ್ತುತ ಆಡಳಿತಾತ್ಮಕ ತೊಡಕುಗಳನ್ನು ಸ್ವಯಂಚಾಲಿತಗೊಳಿಸುವುದು ಮತ್ತು ಸರಳೀಕರಿಸುವುದು, ಹಾಗೂ ವಿಶೇಷವಾಗಿ ಸಣ್ಣ ಉದ್ಯಮಗಳಿಗೆ ನಿಯಮ ಪಾಲನೆಯ ಹೊರೆಯನ್ನು ಕಡಿಮೆ ಮಾಡುವುದು ಈ ಸುಧಾರಣೆಗಳ ಮುಖ್ಯ ಉದ್ದೇಶವಾಗಿದೆ. ಈ ಐದು ಅಂಶಗಳ ಪ್ರಸ್ತಾವನೆಯು ಪ್ರಕ್ರಿಯೆ ಸುಧಾರಣೆಗಳು, ರಚನಾತ್ಮಕ ಸುಧಾರಣೆಗಳು, ಜೀವನ ಮತ್ತು ವ್ಯಾಪಾರ ನಿರ್ವಹಣೆಯ ಸುಲಭೀಕರಣ, ಸೇವಾ ರಫ್ತು ಮತ್ತು ಇ-ಕಾಮರ್ಸ್‌ನಂತಹ ವಿಷಯಗಳನ್ನು ಒಳಗೊಂಡಿದೆ.

********

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಹಾಗೂ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ ಕೂಡಿರುವ ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ಬೇವು ಲೇಪಿತ ಯೂರಿಯಾ, ೨೦೧೫ ಕುರಿತ ಒಂದು ವರದಿ

ಇಲ್ಲಿದೆ. ಸೆಪ್ಟೆಂಬರ್ ೨೦೧೫ರಲ್ಲಿ ಭಾರತದಲ್ಲಿ ಉತ್ಪಾದನೆಯಾಗುವ ಎಲ್ಲಾ ಯೂರಿಯಾಗೆ ಬೇವಿನ ಲೇಪನವನ್ನು ಕಡ್ಡಾಯಗೊಳಿಸಿದ ಸರ್ಕಾರ, ಅದೇ ವರ್ಷದ ಡಿಸೆಂಬರ್‌ನಲ್ಲಿ ಆ ನಿಯಮವನ್ನು ಆಮದು ಮಾಡಿಕೊಂಡ ಯೂರಿಯಾಗೂ ವಿಸ್ತರಿಸಿತು. ಇದರಿಂದಾಗಿ ದೀರ್ಘಕಾಲದಿಂದ ಅತ್ಯಂತ ದುಬಾರಿಯಾಗಿದ್ದ ಯೂರಿಯಾ ಸಮಸ್ಯೆಗೆ ಪರಿಹಾರ ಸಿಕ್ಕಿತು. ರೈತರಿಗೆ ಮೂಲ ಬೆಲೆಯ ಅತ್ಯಲ್ಪ ಭಾಗದಷ್ಟು ದರದಲ್ಲಿ ಮಾರಾಟವಾಗುತ್ತಿದ್ದ ಯೂರಿಯಾವನ್ನು ಕೈಗಾರಿಕೆಗಳಿಗೆ ಅಕ್ರಮವಾಗಿ ತಲುಪಿಸಲಾಗುತ್ತಿತ್ತು. ಇದರಿಂದಾಗಿ ಯೂರಿಯಾ ಮೇಲಿನ ಸಬ್ಸಿಡಿಯು ಖಾಸಗಿ ಲಾಭವಾಗಿ ಪರಿವರ್ತನೆಗೊಳ್ಳುತ್ತಿತ್ತು. ಹಾಗಾಗಿ ರೈತರಿಗೆ ಸಿಗಬೇಕಾದ ಪ್ರಮಾಣದಲ್ಲಿ ಯೂರಿಯಾ ಲಭ್ಯವಾಗುತ್ತಿರಲಿಲ್ಲ. ಯೂರಿಯಾ ಹರಳುಗಳಿಗೆ ಬೇವಿನ ಲೇಪನ ಮಾಡುವುದರಿಂದ, ಖರೀದಿದಾರರಿಗೆ ಆ ಉತ್ಪನ್ನವು ನಿಷ್ಪ್ರಯೋಜಕವಾಯಿತು. ಆದರೆ ಕೃಷಿ ಭೂಮಿಗೆ ಅದು ಹೆಚ್ಚು ಉಪಯುಕ್ತವಾಯಿತು. ಏಕೆಂದರೆ, ಬೇವಿನ ಲೇಪನವು ಸಾರಜನಕದ ಬಿಡುಗಡೆಯನ್ನು ನಿಧಾನಗೊಳಿಸುತ್ತದೆ ಮತ್ತು ಸಸ್ಯವು ವಾಸ್ತವವಾಗಿ ಹೀರಿಕೊಳ್ಳುವ ಪ್ರಮಾಣವನ್ನು ಹೆಚ್ಚಿಸುತ್ತದೆ. ಸರ್ಕಾರದ ಈ ನಿಲುವಿನಿಂದಾಗಿ ಯೂರಿಯಾದ ಅಕ್ರಮ ಬಳಕೆಯು ಅತ್ಯಲ್ಪ ಮಟ್ಟಕ್ಕೆ ಕುಸಿಯಿತು. ಇದರಿಂದಾಗಿ ಸರ್ಕಾರಿ ಬೊಕ್ಕಸಕ್ಕೆ ಸುಮಾರು ೧೦ ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗಿದೆ ಎಂದು ಅಂದಾಜಿಸಲಾಗಿದೆ. ಬೆಳೆ ಇಳುವರಿಯೂ ಹೆಚ್ಚಾಯಿತು: ಭತ್ತದಲ್ಲಿ ಶೇಕಡ ೫.೭೯, ಜೋಳದಲ್ಲಿ ಶೇಕಡ ೭.೧೪, ಸೋಯಾಬೀನ್‌ನಲ್ಲಿ ಶೇಕಡ ೭.೪, ತೊಗರಿಯಲ್ಲಿ ಶೇಕಡ ೧೬.೮೮ ಮತ್ತು ಕಬ್ಬಿನಲ್ಲಿ ಶೇಕಡ ೧೭.೫ ರಷ್ಟು ಏರಿಕೆ ಕಂಡುಬಂದಿತು. ಕೇವಲ ಒಂದು ಬಾರಿಯ ಬೇವಿನ ಲೇಪನವು ದಶಕಗಳಿಂದ ನಡೆಯುತ್ತಿದ್ದ ಸಂಪನ್ಮೂಲ ಸೋರಿಕೆಗೆ ತಡೆ ಹಾಕಿತು.

********

ಹಿಂದಿ ಮತ್ತು ಮರಾಠಿ ಚಿತ್ರರಂಗದ ಹಿರಿಯ ನಟ ನಾನಾ ಪಾಟೇಕರ್ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ನಾನಾ ಪಾಟೇಕರ್ ಅವರು ಪ್ರಬಲವಾದ ಮತ್ತು ಆಳವಾಗಿ ಪ್ರಚೋದಿಸುವ ನಟನೆಯ ಮೂಲಕ ಪಾತ್ರಗಳಿಗೆ ಜೀವ ತುಂಬಿದ್ದರು ಎಂದು ರಾಷ್ಟ್ರಪತಿ ಹೇಳಿದ್ದಾರೆ. ನಾನಾ ಪಾಟೇಕರ್ ಅವರು ಬಹುಮುಖ ಪ್ರತಿಭೆಯುಳ್ಳ ಮತ್ತು ಅಗಾಧ ಪ್ರತಿಭಾನ್ವಿತ ಕಲಾವಿದರಾಗಿದ್ದರು ಎಂದು ಸಾಮಾಜಿಕ

ಮಾಧ್ಯಮ ಪೋಸ್ಟ್‌ನಲ್ಲಿ ಉಪರಾಷ್ಟ್ರಪತಿಗಳು ಹೇಳಿದ್ದಾರೆ.ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ನಾನಾ ಪಾಟೇಕರ್ ಅವರಲ್ಲಿದ್ದಂತಹ ವಿಶಿಷ್ಟ ಮತ್ತು ಪ್ರಭಾವಶಾಲಿ ವ್ಯಕ್ತಿತ್ವ ಕೆಲ ನಟರಲ್ಲಿ ಮಾತ್ರ ಕಂಡುಬರುತ್ತದೆ ಎಂದು ಹೇಳಿದ್ದಾರೆ.

********

ಹಿರಿಯ ನಟ ನಾನಾ ಪಾಟೇಕರ್ ಅವರ ಅಂತ್ಯಕ್ರಿಯೆಯು ಇಂದು ಸಂಜೆ ೪ ಗಂಟೆಗೆ ಪುಣೆ ಸಮೀಪದ ಡಾಂಜೆಯಲ್ಲಿ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ನಡೆಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಡಾಂಜೆಯಲ್ಲಿರುವ ನಾನಾ ಪಾಟೇಕರ್ ಅವರ ಫಾರ್ಮ್‌ಹೌಸ್‌ನಲ್ಲಿಯೇ ಅವರ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಲಾಗುತ್ತದೆ. ಹಿಂದಿ ಮತ್ತು ಮರಾಠಿ ಚಿತ್ರರಂಗದಲ್ಲಿ ತಮ್ಮ ಶ್ರೇಷ್ಠ ಅಭಿನಯಕ್ಕೆ ಹೆಸರುವಾಸಿಯಾಗಿದ್ದ ನಟ, ದಶಕಗಳ ಸುದೀರ್ಘ ವೃತ್ತಿಜೀವನವನ್ನು ಹೊಂದಿದ್ದರು. ಮೂರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿದ್ದರು.

********

ಟೇಬಲ್ ಟೆನಿಸ್‌ನಲ್ಲಿ, ಬೀಜಿಂಗ್‌ನಲ್ಲಿ ನಡೆದ 'ಚೀನಾ ಸ್ಮ್ಯಾಶ್' ಪಂದ್ಯಾವಳಿಯಲ್ಲಿ ಭಾರತದ ಮನುಷ್ ಶಾ ಮತ್ತು ದಿಯಾ ಚಿಟಲೆ ಜೋಡಿಯು ರೊಮೇನಿಯಾದ ಎಡ್ವರ್ಡ್ ಅಯೋನೆಸ್ಕು ಮತ್ತು ಬರ್ನಾಡೆಟ್ ಸ್ಜೋಕ್ಸ್ ಅವರನ್ನು ೩-೦ ಅಂತರದಿಂದ ಸೋಲಿಸುವ ಮೂಲಕ, 'ಡಬ್ಲ್ಯುಟಿಟಿ ಗ್ರ್ಯಾಂಡ್ ಸ್ಮ್ಯಾಶ್'ನ ಸೆಮಿಫೈನಲ್ ತಲುಪಿದ ಮೊದಲ ಭಾರತೀಯ ಮಿಶ್ರ ಡಬಲ್ಸ್ ಜೋಡಿ ಎಂಬ ಇತಿಹಾಸ ನಿರ್ಮಿಸಿದೆ. ಐದನೇ ಶ್ರೇಯಾಂಕಿತ ಭಾರತೀಯ ಜೋಡಿಯು ಕ್ವಾರ್ಟರ್ ಫೈನಲ್ ಪಂದ್ಯವನ್ನು ೧೧-೬, ೧೩-೧೧, ೧೧-೩ ಅಂತರದಲ್ಲಿ ಗೆದ್ದು ಅಂತಿಮ ನಾಲ್ಕರ ಹಂತದಲ್ಲಿ ಸ್ಥಾನ ಖಚಿತಪಡಿಸಿಕೊಂಡಿತು. ಆದಾಗ್ಯೂ, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಮಾನವ್ ಠಕ್ಕರ್ ಅವರು ಫ್ರಾನ್ಸ್‌ನ ಏಳನೇ ಶ್ರೇಯಾಂಕಿತ ಆಟಗಾರ ಅಲೆಕ್ಸಿಸ್ ಲೆಬ್ರನ್ ವಿರುದ್ಧ ೦-೩ ಅಂತರದಲ್ಲಿ ಸೋತು 'ರೌಂಡ್ ಆಫ್ ೩೨' ಹಂತದಲ್ಲೇ ಹೊರಬಿದ್ದರು. ಮಹಿಳೆಯರ ಡಬಲ್ಸ್ ವಿಭಾಗದಲ್ಲಿ, ದಿಯಾ ಚಿಟಲೆ ಮತ್ತು ಯಶಸ್ವಿನಿ ಘೋರ್ಪಡೆ ಅವರು 'ರೌಂಡ್ ಆಫ್ ೧೬' ಹಂತದಲ್ಲಿ ಚೀನಾದ ಗಾವೊ ಯುಕ್ಸಿನ್ ಮತ್ತು ಕ್ಸಿಯಾಂಗ್ ಜುನ್ಲಿನ್ ವಿರುದ್ಧ ೨-೩ ಅಂತರದ ಅಲ್ಪ ಅಂತರದ ಸೋಲನ್ನು ಅನುಭವಿಸಿದರು.

****END****